**2 ನೇ ಹೆಚ್ಚುವರ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ**

ಸಿಸಿ ನಂಬ್ರಃ 1296/2023
ಡಿ ಡಬ್ಲ್ಯೂ- 01

| | | |
|---|---|---|
| ಸಾಕ್ಷಿದಾರರ ಹೆಸರು | : | ಅರುಣ್ ಕುಮಾರ್ ಶೆಟ್ಟಿ |
| ತಂದೆಯ ಹೆಸರು | : | ಭಾಸ್ಕರ ಶೆಟ್ಟಿ |
| ಪ್ರಾಯ | : | 50 ವರ್ಷ |
| ಉದ್ಯೋಗ | : | ಕೃಷಿ |
| ವಾಸ | : | ಅಂಪಾರು |

ದಿನಾಂಕಃ **25-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

ಮುಖ್ಯ ವಿಚಾರಣೆಃ

1. ನಾನು ಕೃಷಿ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ತಮ್ಮ 50 ಸಾವಿರ ಸಾಲವನ್ನು ಮಾಡಿದ್ದನು. ಆ ಸಾಲಕ್ಕೆ ನನ್ನ ಬಳಿ ಜಾಮೀನು ಕೊಡು ಅಂತ ಕೇಳಿರುತ್ತಾನೆ. ನಾನು ಹಾಗೂ ಶಿವರಾಮ ಶೆಟ್ಟಿಯವರು ಜಾಮೀನು ಕೊಟ್ಟಿರುತ್ತೇವೆ. ಸಾಲಕ್ಕೆ ನಾನು ಜಾಮೀನು ಕೊಟ್ಟಿರುತ್ತೇನೆ. ಅವರು ಆಗ ನನ್ನ ಬಳಿ ಖಾಲಿ ಚೆಕ್ ಕೇಳಿರುತ್ತಾರೆ. ನಾನು ಅವರಿಗೆ ಸಹಿ ಮಾಡಿ ಖಾಲಿ ಚೆಕ್ ಕೊಟ್ಟಿರುತ್ತೇನೆ. ಸಾಲವನ್ನು ನನ್ನ ತಮ್ಮ ತೀರಿಸಿರುತ್ತಾನೆ. ನಾನು ಆಗ ಅವರಿಗೆ ಚೆಕ್ ನ್ನು ವಾಪಾಸು ಕೊಡಿ ಎಂದು ಕೇಳಿದ್ದು, ಅವರು ಮತ್ತೆ ಕೊಡುತ್ತೇನೆ, ಮತ್ತೆ ಕೊಡುತ್ತೇನೆ ಎಂದು ಹೇಳಿರುತ್ತಾರೆ. ತದನಂತರ ಚೆಕ್ ನ್ನು ಬ್ಯಾಂಕಿಗೆ ಹಾಕಿ ಪ್ರಕರಣ ಸಲ್ಲಿಸಿರುತ್ತಾರೆ. ತದನಂತರ ನನಗೆ ನೋಟಿಸು ಬಂದಿರುತ್ತದೆ. ನಾನು ಆಗ ನೋಟಿಸು ವಾಪಾಸು ಕಳುಹಿಸಿರುತ್ತೇನೆ, ಸಾಕ್ಷಿ ಪುನಃ ಆ ನೋಟಿಸಿಗೆ ಉತ್ತರ ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ. ತದನಂತರ ಹೆಚ್ಚಿನ ದುಡ್ಡಿಗೆ ನನ್ನ ವಿರುದ್ಧ ಅವರು ಈ ಪ್ರಕರಣ ಸಲ್ಲಿಸಿರುತ್ತಾರೆ. ನನಗೆ ರೋಹಿತ್‌ರವರ ಪರಿಚಯ ಇರುವುದಿಲ್ಲ. ಅವರು ದುಡ್ಡು ಕೇಳಲು ಅಧಿಕಾರ ಇರುವುದಿಲ್ಲ. ಸಾಕ್ಷಿಗೆ ಈಗ ವಕೀಲರು ನೀವೇನಾದರೂ ಹಣ ಕೊಡುವುದು ಬಾಕಿ ಇದೆಯಾ ಎಂದು ಪ್ರಶ್ನೆ ಕೇಳಿದ್ದಕ್ಕೆ ಸಾಕ್ಷಿ ನಾನೇನು ಕೊಡುವುದು ಬಾಕಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಅಷ್ಟು ಹಣ ಕೊಡಲು ಬಾಕಿ ಇರುವುದಿಲ್ಲ.

ಈ ಸಂದರ್ಭದಲ್ಲಿ ಸಾಕ್ಷಿ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ _ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ